ನಗರದ ರಸ್ತೆಗಳನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಮಾರ್ಪಾಡಿಸುವುದು

4477 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಾಂಡ್ ಹಣದಲ್ಲಿ ದುರಸ್ತಿಗೊಂಡ ರಸ್ತೆಗಳನ್ನು ಅಂತರ ರಾಷ್ಟ್ರೀಯ ಗುಣಮಟ್ಟಕ್ಕೆ ಮಾರ್ಪಡಿಸಲು ಸರ್ಕಾರ ತೀರ್ಮಾನಿಸಿದೆಯೆ?

ಆ) ಇದಕ್ಕಾಗಿ ಯಾವ ಯಾವ ರಸ್ತೆಗಳನ್ನು ಗುರುತಿಸಲಾಗಿದೆ ವಾರ್ಡ್‌ವಾರು ಮಾಹಿತಿ ನೀಡುವುದು?

ಇ) ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸುವಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರವು ರಚಿಸಿರುವ ಆಯೋಗಗಳು

4478 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಒಂದು ವರ್ಷದಿಂದ ರಚಿಸಿರುವ ಎಷ್ಟು ಆಯೋಗಗಳು ಕಾರ್ಯ ನಿರ್ವಹಿಸುತ್ತಿವೆ?

ಆ) ಇವುಗಳ ಪೈಕಿ ಎಷ್ಟು ಆಯೋಗಗಳನ್ನು ರದ್ದುಗೊಳಿಸಲಾಗಿದೆ?

ಇ) ಎಷ್ಟು ಆಯೋಗಗಳು ಮಧ್ಯಂತರ ವರದಿ ಹಾಗೂ ಅಂತಿಮ ವರದಿ ಸಲ್ಲಿಸಿದೆ?

ಈ) ಪ್ರತಿಯೊಂದು ಆಯೋಗಕ್ಕೂ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 09. (ಒಂಭತ್ತು). ಇವುಗಳಲ್ಲಿ 8 ಕಾರ್ಯನಿರ್ವಹಿಸುತ್ತಿವೆ..

ಆ) ಯಾವುದನ್ನೂ ರದ್ದುಗೊಳಿಸಿಲ್ಲ.

ಇ) ಎರಡು. (ಮಧ್ಯಂತರ ವರದಿ ಒಂದು, ಅಂತಿಮ ವರದಿ ಒಂದು)

ಈ) ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ನಿಖರವಾದ ಖರ್ಚಿನ ಮಾಹಿತಿ ತಕ್ಷಣಕ್ಕೆ ಲಭ್ಯವಿಲ್ಲ.